Regd No B G155

5—8—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅರವಿನೆ ಸಿಂಸ್ಥೇದಾರ್ ಎಂ ಎ ಸುಬ್ಬರಾಯುರು ಸಂಪಾದಕರು — ಧರ್ಮಪ್ರಚಾರನಿರತ ಎಂ ಎಸ್ ಕೃಷ್ಣರಾವ್ ಪ್ರೈಸ

ಒಳಗಿನ ಗುಟ್ಟು ಶಿವನೇ ಬಲ್ಲ

—o—

ಒಗಟಿನ ರೂಪದಲ್ಲಿ ಮಾತಾಡುವುದು ರಾಜಕೀಯ ಉದ್ಯೋಗಸ್ಥರ ಲಕ್ಷಣವೆಂದು ಕಾಣುತ್ತದೆ ; ಡಾ॥ ಜಕೀರ್ ಹುಸೇನ್ ರಂತಹ ವಯಸ್ಸಾದ ವ್ಯಕ್ತಿಗಳು ಕೂಡ ಅದಕ್ಕೆ ಅತೀತರಾದವರಾಗಿರುವುದಿಲ್ಲ.

ಜನಾಬೆಯ ಸನ್ನಿವೇಶದಲ್ಲಿ ರಾಜಕೀಯ ಪಕ್ಷಗಳು ಜಾತಿಯ ಆಧಾರದ ಮೇಲೆ ತಮ್ಮ ಅಭ್ಯರ್ಥಿಗಳ ಪರವಾಗಿ ಮತಗಳನ್ನು ಕೊಡುತ್ತವೆಂದು ಉದಾಹರಿಸಿದ್ದಕ್ಕೆ ಡಾ॥ ಜಕೀರ್ ಹುಸೇನ್ ಹೇಳಿದ್ದು ; ಅದಕ್ಕೆ ಅವಶ್ಯವಿರುವ ಉತ್ತಮ ಉದಾಹರಣೆ ದಿ ॥ ವಜೀರಾನ ಅಬ್ದುಲ್ ಕಲಂ ಆಜಾದ್ರು ಜನಾಬೆ ; ವಜೀರಾನೆಯಂತಹ ದೊಡ್ಡ ವ್ಯಕ್ತಿ ಕೂಡ ಮುಸಲ್ಮಾನರು ಅಧಿಕವಾಗಿರುವ ಸ್ಥಾನವನ್ನಾಲಿಸಿಕೊಂಡಿದ್ದರೆನ್ನವುದು ಡಾ ॥ ಹುಸೇನ್ರ ವಾದ.

ದೂರದ ಬೆಟ್ಟ ನೋಡಲು ಬಹಳ ಚಂದ ; ಹಾಗೇ ಇದೆ ಡಾ ॥ ಜಕೀರ ಹುಸೇನರ ವಾದ ; ಬಹಳ ಅರ್ಥಗರ್ಭಿತವಾಗಿ ಅವರಂತಾಡಿದ್ದಾರೆ : ಬಾಹ್ಯದೃಷ್ಟಿಗೆ ಅನುಭವವಾಗ ವ ಉದ್ದೇಶವನ್ನಿಟ್ಟುಕೊಂಡು ಅವರು ಆ ರೀತಿ ಹಿದ್ದಾರೆಯೆ ? ಡಾ॥ ಜಕೀರ ಹುಸೇನರು ತಮಿಳುನಾಡಿನ ಗೋವಿಂದಗಾಡೆಯಲ್ಲಿ ಹೇಳಿದ್ದ ಮಾತುಗಳನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು

ನಿಜವಾಗಿ ಡಾ ॥ ಜಕೀರ್ ಹುಸೇನರು ಮನಸ್ಸಿನಲ್ಲಿರುವುದಾದರೂ ಏನು ? ಮುಸ್ಲಿಮರ ಜನಸಂಖ್ಯೆ ಅಧಿಕವಾಗಿರುವಲ್ಲಿ ಕಾಂಗ್ರೆಸ್ಸಿನ ವತಿಯಿಂದ ಮಹಮದೀಯರು ಅಲ್ಲಿ ಜನಾನಬೆಯ ಕಳಕ್ಕಿಳಿಯಬಾರದು : ಅಂದರೆ ಆ ಸ್ಥಳದಲ್ಲಿ ಮುಸ್ಲಿಮೇತರರು ಅಭ್ಯರ್ಥಿಯಾಗಬೇಕು ; ಮುಸ್ಲಿಮೇತರರು ಅಧಿಕವಾಗಿರುವಲ್ಲಿ ಮಹಮದೀಯರಿಗೇನೇ ಪಕ್ಷ ಕೊಡಬೇಕು ! ಆಗ ಏನಾಗುತ್ತದೆ : ಮಹಮದೀಯರ ಸಂಖ್ಯೆ ಅಧಿಕವಿರುವಲ್ಲಿ ನಿಂತ ಅಭ್ಯರ್ಥಿ (ಮುಸ್ಲಿಮೇತರ) ಸೋಲುವದುಲ್ಲಿ ಆಶ್ಚರ್ಯವಿಲ್ಲ , ಆ ಸ್ಥಾನದಿಂದ ಕಾಂಗ್ರೆಸ್ಸೇತರನಾದರೂ ಮುಸ್ಲಿಮನು (ಮುಸ್ಲಿಂ ಲೀಗು ಅಥವಾ ಇತರ ಬಣ್ಣದ) ಆರಿಸಿಬರುವನು ; ಇತ್ತ ಮಹಮದೀಯರೇತರರು ಅಧಿಕವಾಗಿರುವಲ್ಲಿ ನಿಲ್ಲುವ ಮಹಮದೀಯರು ಆರಿಸಿಬರುವುದರಲ್ಲಿ ಸಂದೇಹವಿಲ್ಲ ; ಮಹಮದೀಯರು ಅದಾವ ಪಕ್ಷದವರಾಬರೂ ಸರಿ— ಆತನು ಮಹಮದೀಯನಿರುತ್ತಾನೆ ; ಹೀಗೆ ಒಂದೇ ಕಲ್ಲಿನಿಂದ ಎರಡು ಹಣ್ಣುಗಳನ್ನುದಿರಿಸಲು ರಹಸ್ಯ ಕೂಟದಲ್ಲಿ ಡಾ॥ ಜಕೀರ ಹುಸೇನರು ಮಾತಾಡಿದ್ದಾರೆ : ಅವರ ಮಾತಿನ ಜಾಲಕ್ಕೆ ಸಿಕ್ಕಿಬಿದ್ದವರಾಯಿತು ; ಅವರ ಮಾತಿನ ಒಳಗಿನ ಗುಟ್ಟು ಶಿವನೇ ಬಲ್ಲ !

ಮುಸ್ಲಿಮೇತರರು ಅದನ್ನು ಶೀಘ್ರಾತಿಶೀಘ್ರ ಕಂಡುಕೊಂಡಲ್ಲಿ ದೇಶಕ್ಕೂ ಸ್ವಾತಂತ್ರ್ಯಕ್ಕೂ ಬಲಬರುವುದರಲ್ಲಿ ಸಂದೇಹವಿಲ್ಲ ; ಇಂತಹ ಕೊಳಕು ರಾಜಕೀಯವನ್ನು ನಿಲ್ಲಿಸಲು ಭಗವಂತನು ಪ್ರಯತ್ನಿಸಬೇಕಾಗಿರುತ್ತದೆ

— ಶಿವಶಂಕರ್

ಭಾಷಾ ಶಾಸನ ತಿದ್ದುಪಡಿ

ನವದೆಹಲಿ— ಅಧಿಕೃತ ಭಾಷಾ ಶಾಸನವನ್ನು ತಿದ್ದುಪಡಿ ಮಾಡುವ ಶಾಸನವು ಹಿಂದಿಯೇತರ ರಾಜ್ಯಗಳಿಗೆ ತೃಪ್ತಿಕರವಾದರೂ, ಕೇಂದ್ರ ಸರಕಾರದಲ್ಲಿರುವ ಹಿಂದಿಯೇತರ ನೌಕರರಿಗೆ ತೊಂದರೆದಾಯಕವಾಗುವ ಸಂಭವವಿದೆಯೆಂದು ಹೇಳಲಾಗಿದೆ

ಭಾರತಕ್ಕೆ ರಷ್ಯಾ ಸಬ್‌ಮೆರಿನ್ನುಗಳು

ಬ್ರಿಟಿಷ್ ಸರ್ಕಾರಕ್ಕೆ ಕಳವಳ

ಲಂಡನ್— ಭಾರತವು ಆರು ಸಬ್‌ಮೆರೀನುಗಳನ್ನು ರಷ್ಯಾದಿಂದ ಕೊಳ್ಳುವ ನಿರ್ಧಾರವು ಬ್ರಿಟಿಷ್ ಸರಕಾರದ ವರ್ತುಲದಲ್ಲಿ ಕಳವಳ ಹುಟ್ಟಿಸಿದೆ — ಇದು ಭಾರತನೌಕಾದೊಡನೆ ರಾಯಲ್ ನೇವಿಯ ಹತ್ತಿರ ಸಂಬಂಧಕ್ಕೆ ಅಪಾಯಕರವೆಂದು ಭಾವಿಸಲಾಗಿದೆ.

★

ಮುಖ್ಯ ಮಂತ್ರಿಗಳಿಗೆ ವಿಮಾನವಿಲ್ಲ

ಬೆಂಗಳೂರು— ಮೈಸೂರು ಸರಕಾರವು ಎಮಾನ ಹೊಂದುವ ಸಲಹೆಯನ್ನು ಮಂತ್ರಿಮಂಡಲ ತಿರಸ್ಕರಿಸಿದೆ ; ವಿಮಾನವು ರಾಜ್ಯವು ಹೊಂದಲಾಗದ ಅಧಿಕ ಬೆಲೆಯು ಭೋಗವಸ್ತುವೆಂದು ಭಾವಿಸಲಾಯಿತು : ಮುಖ್ಯಮಂತ್ರಿಗಳಿಗೆ ವಿಮಾನ ವಿಷಯವನ್ನು ಕೆಲ ವಾರಂಗಳ ಹಿಂದೆ ಬಳ್ಳಾರಿಯಲ್ಲಿ ಬಹಿರಂಗ ಸಭೆಯಲ್ಲಿ ರಾಜ್ಯಪಾಲರು ಶ್ರೀ ಗಿರಿಯವರು ಸಲಹೆ ಮಾಡಿದ್ದರು.

★

ರಷ್ಯಾ ರಾಕೆಟ್ ಜೋಟು

ನವದೆಹಲಿ— ಭಾರತವು ರಷ್ಯಾದಿಂದ ರಾಕೆಟ್ ಬೋಟುಗಳನ್ನು ಪಡೆಯುತ್ತಿದೆ — ಭಾರತ ನೌಕಾದ ಉತ್ಪನ್ನ ಹೆಚ್ಚಿಸುವ ಬಗ್ಗೆ ರಷ್ಯಾ ಸರಕಾರದೊಡನೆ ಭಾರತದ ಅಧಿಕೃತ ನಿಯೋಗವು ಮಾಸ್ಕೋದಲ್ಲಿ ತಾ॥ 15 ರಂದು ಚರ್ಚಿಸಲಿದೆ

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ —
ಅಸ್ಥಾನವಿದ್ವಾನ್ ಧರ್ಮಾಧಿಕಾರಿ ರಾಜಕಾರ್ಯಸಕ್ತ, ಜ್ಯೋತಿರ್ವಿದ್ವನ್ಮಣಿ ಸಂಪಕೃಷ್ಣಜೋಯಿಸರಿಂದ

6 ಶುಕ್ರವಾರ ದಶಮಿ ಅನೂರಾಧ

—

ನಾಳೆ ಮಧ್ಯಾಹ್ನ ಲಕ್ಷ್ಮಿ ಪೂಜೆಯ ಪ್ರಯುಕ್ತ ಸತ್ಯವಾದಿ ಕಾರ್ಯಾಲಯಕ್ಕೆ ರಜವಿದೆ

★

ಗೋವಾ ವಿಚಾರದಲ್ಲಿ

ಕಲ್ಕತ್ತಾ— ಗೋವಾ ಜನಾನಬೆಯ ಅಹಾರಾಷ್ಟ್ರಕ್ಕಾಗಲೀ ಮೈಸೂರಿಗಾಗಲೀ ಸಂಬಂಧಿಸಿದವರಿಂದ ನಡೆಸಲ್ಪಡಬಾರದೆಂದೂ, ಅಲ್ಲಿಯ ಮಂತ್ರಿಗಳು ಜನಾನಬೆಗೆ ಮುಂಚೆ ಅಲ್ಲಿಯ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದೂ ಪಿಎಸ್ಪಿ ನಾಯಕ ಶ್ರೀ ಹೆಜ್ ಎ ಕಾರ್ ವರ್ತ್ ಹೇಳಿದ್ದು—

★

ವಿರೋಧಿಗಳ ಹೇಳಿಕೆ

ಬೊಂಬಾಯಿ— ಮಹಾರಾಷ್ಟ್ರ ಕ್ಕೆ ಗೋವಾ ಸೇರ್ಪಡೆ ತೀರ್ಮಾನಿಸಲು ಅಲ್ಲಿ ಕೊಲಿಷನ್ ಮಂತ್ರಿಮಂಡಲ ಏರ್ಪಡಿಸಿಲ್ಲವೆಂದು ವಿರೋಧಿಗಳು ಹೇಳಿದ್ದಾರೆ.

ಸಮಾಚಾರ ಸಂಗ್ರಹ

★

ನವದೆಹಲಿ — ಸಕ್ಕರೆ ಉತ್ಪಾದನೆ ಹೆಚ್ಚಿದ್ದರೂ ಅದರ ಮೇಲಿನ ಹತೋಟಿ ಇರುವುದೆಂದು ಭಾರತ ಆಹಾರ ಮಂತ್ರಿ ಶ್ರೀ ಸಿ ಸುಬ್ರಹ್ಮಣ್ಯಂ ಹೇಳಿದರು — ರಾಜ್ಯಗಳಿಗೆ ಸಕ್ಕರೆ ಕಂಗಳಿಗೆ 15000 ಟನ್ನು ಹೆಚ್ಚಿ ಪಲಾಗ ವುದೆಂದು ಹೇಳಿದರು — ಕೆಲವು ನಗ ಗಳಲ್ಲಿ ರೇಷನಿಂದು ವಜಾ ಆಗಬೇಕೆಂಬ ವಿಷಯವು ಆಯಾ ರಾಜ್ಯಕ್ಕೆ ಸೇರಿದ್ದೆಂದು — 1965 ರಲ್ಲಿ 2-6 ಲಕ್ಷ ಟನ್ ಸಕ್ಕರೆ ರಫ್ತು ಮಾಡ ಲ್ಪಡಿಗಿರುವುದೆಂದೂ, ನಮ್ಮ ವಿದೇಶೀ ವಿನಿಮಯ ಬಿಕ್ಕಟ್ಟಿನಲ್ಲಿರುವುದಾಂದ ಹೆಚ್ಚು ಸಕ್ಕರೆ ರಫ್ತಾಗಬೇಕೆಂದೂ ಹೇಳಿದರು.

೦ ೦ ೦

ನವದೆಹಲಿ — ವಾನು ಕಮ್ಯೂನಿಸ್ಟರು ಹವಣಿಸುತ್ತಿರುವ ಚಳಿವಳದ ವಿಚಾರ ಸರಾವಂಕ್ಕೆ ಗೊತ್ತಿಂದೂ, ಅದನ್ನು ವಟ್ಟಹಾಕಲು ಸರ್ಕಾರ ಸಿದ್ಧವಡಿ, ಸಿದೆಯೆಂದೂ ಪ್ರಕಟವಾಗಿದೆ

೦ ೦ ೦ ೦

ಪೂನಾ — ಅಂತರ್ ರಾಜ್ಯಗಳ ವ್ಯಾಜ್ಯಗಳು ತೀರ್ಮಾನಕ್ಕೆ ಸು ಪ್ರೀ ಂ ಕೋರ್ಟಿಗೆ ಹೋಗುವಂತೆ ರಾಜ್ಯಾಂಗ ತಿದ್ದುಪಡಿಯಾಗಬೇಕೆಂದು ಲೈಟ್‌ಲ್ಲೆ ಮಂತಿ ಎಸ್' ಕೆ ಪಾಟೀಲರು ಹೇಳಿದರು.

★

ಹೈದರಾಬಾದು — ತಿರುಮಲೆ-ತಿರುಪತಿ ಕ್ಷೇತ್ರದಲ್ಲಿ ಹಾಲು ಕರೆ ಯುವಾಗ ರೇಡಿಯೊಗಳಂ ಮತ್ತು ಸ ಪ್ರಭಾತ ಸುಗೀತ ಹೊಮ್ಮುತ್ತಿರುವದರಿಂದ ಹೆಚ್ಚು ಹಾಲು ದೊರೆಯುತ್ತಿದೆ

Help The Gorakshana

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರು, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿ ಗಳವರು ಉದಾರ ಅನುಗ್ರಹ ಕೃಪೆಯಾಗಿಬೆ

ಗೋರಕ್ಷಣೆಗೆ ಬೆಂಬಲ ನೀಡಿ

ನ್ನಡ ನಾಡಿನಲ್ಲಿ 'ಗೋರಕ್ಷಣೆ ಪಾಣಿದಯೆ, ತಾಪತ್ರಹಾರ, ಪಶುವೈದ್ಯ ವಿಚಾರ ಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ ; ವಾರ್ಷಿಕ ಚಂದ 50 ಪೈಸೆ. ಸಹಾಯಕರು ರೂ 10, ಪ್ರೋತ್ಸಾಹಕರು ರೂ 25 : (ಒಂದು ಸಾರಿ ಮಾತ್ರ)

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹಧನವನ್ನೂ ವಂದನಾಪೂರ್ವಕ ವಾಗಿ ಸ್ವೀಕರಿಸಲಾಗುವುದು

ವಿಳಾಸ — ಗೋರಕ್ಷಣ ಆಫೀಸು; ಚಾಮರಾಜಪುರಂ, ಮೈಸೂರು 4

ಅಶೋಕ ಏಜೆನ್ಸೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ

ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Quality Printi g — Neat Binding

Lakshminarasimha Press

Sivarampet, Mysore

ವುಡಲಾಂಡ್ಸ್

30-7-65 ರಿಂದ

ಅಮೋಘ ಅಂಧ

ಜಾಕಿ ಮುಖರ್ಜಿ — ರಾಜಶ್ರೀಯವರ ಕಲಾತ್ಮಕ ಅಭಿನಯದಿಂದ ಕೂಡಿದ

.... ಚಿತ್ತಾಕರ್ಷಕ ಹಿಂದಿ ಚಿತ್ರಗಳ ....

ಜೀ ಚಾಹ್‌ತಾ ಹೈ

★ Ji Chahta Hai ★

ಸಂಗೀತ : ಕಲ್ಯಾಣಜೀ ಆನಂದಜೀ — [ಪ್ರತಿ ದಿನ 3 ಪ್ರದರ್ಶನಗಳು

ಅಪೆರ—

30-7-65 ರಿಂದ

ದೊರಕಿತೆ ದೊಂಗಲು (ತೆಲುಗು)

ನಟವರ್ಗ — ಎನ್ ಟಿ ರಾಮರಾವ್, ಕಾಂಕಾರಾವ್, ರಾಜಶ್ರೀ, ರಾಜಶ್ರೀ ಜಮುನಾ, ಗುಮ್ಮಡಿ, ರಮಣರೆಡ್ಡಿ, ನಾಗಯ್ಯ

ತೆಲುಗು ಪತ್ರೀದಾರಿ ಚಿತ್ರ] [ಪ್ರತಿ ದಿನ 3 ಆಟಗಳು

SHAKTI SUDHA

★

A Superb Tonic

★ Protect the Cow ★



ಗೋಸಂರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

Edited, Printed & Published by Dharma pracharu niratha M S Krishna Rao (Proprietor) at the Satyavadi Press Chamarajapuram, Mysore 4